ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

DTE-ADMI0ACM2/16/2020

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:28-08-2020.

**-:: ತಿದ್ದುಪಡಿ::-**

**ವಿಷಯ:-** 2020-21ನೇ ಸಾಲಿಗೆ ಅನ್‌ಲೈನ್ ನಾನ್-ಇಂಟರಾಕ್ಟೀವ್-ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆ ಹಂತಗಳ ವೇಳಾಪಟ್ಟಿ ತಿದ್ದುಪಡಿ ಬಗ್ಗೆ.

-0000000-

2020-21ನೇ ಸಾಲಿನ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಅನ್‌ಲೈನ್ ನಾನ್-ಇಂಟರಾಕ್ಟೀವ್-ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆ ಹಂತಗಳ ಪರಿಷ್ಕೃತ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದ್ದು, ಎಲ್ಲಾ 129 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳಲ್ಲಿ ಈ ಬಗ್ಗೆ ವಿದ್ಯಾರ್ಥಿಗಳ ಹಾಗೂ ಪೋಷಕರುಗಳ ಗಮನಕ್ಕೆ ತರುವ ನಿಟ್ಟಿನಲ್ಲಿ ಸೂಚನಾಫಲಕದಲ್ಲಿ ಪ್ರಕಟಿಸಲು ಅಗತ್ಯ ಕ್ರಮ ಜರುಗಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಆಯುಕ್ತರು

**ಇವರಿಗೆ,**

***ಎಲ್ಲಾ 129 ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ - ಸದರಿ ತಿದ್ದುಪಡಿ ವೇಳಾಪಟ್ಟಿಯನ್ನು ಸಂಸ್ಥೆಯ ಸೂಚನಾಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.***

**ಪ್ರತಿ ಮಾಹಿತಿಗಾಗಿ:-**

1. ಆಯುಕ್ತರವರ ಆಪ್ತಶಾಖೆಗೆ.
2. ನಿರ್ದೇಶಕರವರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ), ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಜಂಟಿ ನಿರ್ದೇಶಕರು(ಪರೀಕ್ಷೆ), ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ.
6. ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ - ಮಾಹಿತಿಗಾಗಿ.
7. ಇ-ಗವರ್ನೆನ್ಸ್ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
8. ಕಡತಕ್ಕೆ.

**2020–21ನೇ ಸಾಲಿಗೆ ಅನ್‌ಲೈನ್ ನಾನ್–ಇಂಟರಾಕ್ಟೀವ್–ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮೂಲಕ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ತಿದ್ದುಪಡಿ ವೇಳಾಪಟ್ಟಿ.**

| ಕ್ರ.ಸಂ. | ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ವಿವರ | ನಿಗಧಿಪಡಿಸಲಾಗಿದ್ದ ಪರಿಷ್ಕೃತ ವೇಳಾಪಟ್ಟಿ | ತಿದ್ದುಪಡಿ ಮಾಡಲಾಗಿರುವ ವೇಳಾಪಟ್ಟಿ |
|---|---|---|---|
| 1. | ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ಸ್ವತಃ ನೇರವಾಗಿ ಈ ಕೆಳಕಂಡ ವೆಬ್‌ಸೈಟ್‌ಗಳ ಮೂಲಕ ಅಥವಾ ಸಮಿಪದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳ ಮೂಲಕ ಆನ್‌ಲೈನ್ ಅರ್ಜಿ, ಮೀಸಲಾತಿ ಪಡೆಯಲಿಚ್ಛಿಸುವ ದಾಖಲಾತಿಗಳನ್ನು ಹಾಗೂ ತಮ್ಮ ಇಚ್ಛೆಗನುಗುಣವಾಗಿ ಕೋರ್ಸ್/ಕಾಲೇಜ್‌ಗಳ ಆಯ್ಕೆ ಮಾಡಿ ಆಪ್ಷನ್ ಎಂಟ್ರಿಯನ್ನು ಸಲ್ಲಿಸಲು ಅಂತಿಮ ದಿನಾಂಕ: | **29–08–2020** (ಸಂಜೆ 5.00 ರವರೆಗೆ) | – |
| 2. | ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟಣೆ ಹಾಗೂ ಅಭ್ಯರ್ಥಿಗಳ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಮೂಲಕ ಮಾಹಿತಿಯನ್ನು ರವಾನಿಸುವ ದಿನಾಂಕ: | 31–08–2020 | – |
| 3. | ಎಸ್.ಎಸ್.ಎಲ್.ಸಿ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ಮೆರಿಟ್ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಮೂಲ ದಾಖಲೆಗಳೊಂದಿಗೆ ಪರಿಷ್ಕರಣೆ/ತಿದ್ದುಪಡಿಗೆ ಹಾಗೂ ಆಪ್ಷನ್ ಎಂಟ್ರಿಯಲ್ಲಿ ಯಾವುದೇ ಪರಿಷ್ಕರಣೆ/ತಿದ್ದುಪಡಿ ಮಾಡಲು ಇಚ್ಛಿಸಿದಲ್ಲಿ ಅಭ್ಯರ್ಥಿಗಳು ಸ್ವತಃ ನೇರವಾಗಿ ವೆಬ್‌ಸೈಟ್‌ಗಳ ಮೂಲಕ ಅಥವಾ ಸಮಿಪದ ಯಾವುದೇ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳಲ್ಲಿ ಮನವಿ ಸಲ್ಲಿಸಲು ಪ್ರಾರಂಭ & ಅಂತಿಮ ದಿನಾಂಕ : | 01–09–2020 ಬೆಳಿಗ್ಗೆ 10.00 ರಿಂದ 03–09–2020 ಸಂಜೆ 5.00 ರವರೆಗೆ | – |
| 4. | ಅಂತಿಮ ಮೆರಿಟ್ ಪಟ್ಟಿ ಪ್ರಕಟಣೆ | **04–09–2020** | – |
| 5. | ಅಣಕು ಸೀಟು ಆಯ್ಕೆ ಫಲಿತಾಂಶ ಪಟ್ಟಿ ಪ್ರಕಟಣೆ (Mock allotment Result) | 07–09–2020ರ (ಸಂಜೆ 5.00 ಗಂಟೆಯ ನಂತರ) | 05–09–2020ರ (ಸಂಜೆ 5.00 ಗಂಟೆಯ ನಂತರ) |
| 6. | ಅಣಕು ಸೀಟು ಆಯ್ಕೆ ಫಲಿತಾಂಶ ಪ್ರಕಟಣೆ ನಂತರ ಆಪ್ಷನ್ ಎಂಟ್ರಿಯಲ್ಲಿ ಮಾತ್ರ ಪರಿಷ್ಕರಣೆ/ತಿದ್ದುಪಡಿ ಮಾಡಲು ಇಚ್ಛಿಸಿದಲ್ಲಿ ಅಭ್ಯರ್ಥಿಗಳು ಸ್ವತಃ ನೇರವಾಗಿ ವೆಬ್‌ಸೈಟ್‌ಗಳ ಮೂಲಕ ಅಥವಾ ಸಮಿಪದ ಯಾವುದೇ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ" ಗಳ ಮೂಲಕ ಮನವಿ ಸಲ್ಲಿಸುವ ದಿನಾಂಕ | 08–09–2020 & 09–09–2020 | 06–09–2020 |
| 7. | ಪ್ರಥಮ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | **10–09–2020** (ಸಂಜೆ 5.00 ಗಂಟೆಗೆ) | **07–09–2020** (ಸಂಜೆ 5.00 ಗಂಟೆಗೆ) |
| 8. | ಪ್ರಥಮ ಸುತ್ತಿನ ಸೀಟು ಹಂಚಿಕೆಯಾದ ನಂತರ ಅಭ್ಯರ್ಥಿಗಳು ಸ್ವತಃ ನೇರವಾಗಿ ವೆಬ್‌ಸೈಟ್‌ಗಳ ಮೂಲಕ ಅಥವಾ ಸಮೀಪ ಇರುವ ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳ ಮುಖಾಂತರ Choice-1, Choice-2 ಆಯ್ಕೆಯನ್ನು ಆನ್‌ಲೈನ್‌ನಲ್ಲಿ ಮಾಡಲು ಪ್ರಾರಂಭ ಮತ್ತು ಅಂತಿಮ ದಿನಾಂಕ | 11–09–2020 ಬೆಳಿಗ್ಗೆ 10.00 ರಿಂದ 15–09–2020 ಸಂಜೆ 5.00 ವರೆಗೆ | 08–09–2020 ಬೆಳಿಗ್ಗೆ 10.00 ರಿಂದ 10–09–2020 ಸಂಜೆ 5.00 ರವರೆಗೆ |
| 9. | Choice-1 ನ್ನು ಆಯ್ಕೆ ಮಾಡಿದ ಅಭ್ಯರ್ಥಿಗಳು ಸೀಟು ಹಂಚಿಕೆಯಾದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿಯೇ ಎಲ್ಲಾ ಮೂಲ ದಾಖಲಾತಿಗಳನ್ನು ಸಲ್ಲಿಸಿ, ನಿಗಧಿತ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆಯಲು ಪ್ರಾರಂಭ ಮತ್ತು ಅಂತಿಮ ದಿನಾಂಕ: | 11–09–2020 ಬೆಳಿಗ್ಗೆ 10.00 ರಿಂದ 16–09–2020 ಸಂಜೆ 5.00 ವರೆಗೆ | 08–09–2020 ಬೆಳಿಗ್ಗೆ 10.00 ರಿಂದ 14–09–2020 ಸಂಜೆ 5.00 ರವರೆಗೆ |
| 10. | ಮೊದಲನೇ ಸುತ್ತಿನ ನಂತರ ಭರ್ತಿಯಾಗದೆ ಉಳಿಕೆ ಸೀಟುಗಳ ಸೀಟ್ ಮ್ಯಾಟ್ರಿಕ್ಸ್‌ನ್ನು (Seat Matrix) ಮೇಲ್ಕಂಡ ವೆಬ್‌ಸೈಟ್‌ಗಳ ಮೂಲಕ ಪ್ರಕಟಿಸುವ ದಿನಾಂಕ: | 18–09–2020 (ಸಂಜೆ 5.00 ಗಂಟೆಗೆ) | **15–09–2020** (ಸಂಜೆ 5.00 ಗಂಟೆಗೆ) |
| 11. | Choice-2 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಹಂಚಿಕೆಯಾದ ಸೀಟ್‌ನ್ನು ತನ್ನಲ್ಲಿಯೇ ಇಟ್ಟುಕೊಂಡು ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಬಹುದು. ಅಭ್ಯರ್ಥಿಯು ಸ್ವತಃ ನೇರವಾಗಿ ವೆಬ್‌ಸೈಟ್‌ಗಳ ಮೂಲಕ ಅಥವಾ ಸಮೀಪ ಇರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ"ಗಳ ಮುಖಾಂತರ ಎರಡನೇ ಸುತ್ತಿನ ಸೀಟು ಹಂಚಿಕೆಗೆ ತಮ್ಮ ಇಚ್ಛೆನುಸಾರ Options ಗಳ ಆದ್ಯತಾ ಕ್ರಮಗಳನ್ನು ಅದಲು ಬದಲು (Reordering) ಮಾಡಲು ಅಥವಾ ಹೊಸದಾಗಿ Options ಗಳನ್ನು ಆದ್ಯತಾ ಕ್ರಮಗಳಲ್ಲಿ ನಮೂದಿಸಲು ಪ್ರಾರಂಭ & ಅಂತಿಮ ದಿನಾಂಕ. | 19–09–2020 ಬೆಳಿಗ್ಗೆ 10.00 ರಿಂದ 22–09–2020 ಸಂಜೆ 5.00 ರವರೆಗೆ | 16–09–2020 ಬೆಳಿಗ್ಗೆ 10.00 ರಿಂದ 18–09–2020 ಸಂಜೆ 5.00 ರವರೆಗೆ |
| 12. | ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 23–09–2020 ಸಂಜೆ 5.00 ಕ್ಕೆ | **19–09–2020** (ಸಂಜೆ 5.00 ಗಂಟೆಗೆ) |
| 13. | ಎರಡನೇ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಿದ ನಂತರ ಅಭ್ಯರ್ಥಿಗಳು ಕಡ್ಡಾಯವಾಗಿ Choice-1 ನ್ನೇ ಆಯ್ಕೆ ಮಾಡಿ ಸೀಟು ಹಂಚಿಕೆಯಾದ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ನಿಗಧಿತ ದಿನಾಂಕದೊಳಗೆ ನಿಗಧಿತ ಶುಲ್ಕವನ್ನು ಪಾವತಿಸಿ ಪ್ರವೇಶ ಪಡೆಯಲು ಅಂತಿಮ ದಿನಾಂಕ | 24–09–2020 ಬೆಳಿಗ್ಗೆ 10.00 ರಿಂದ 28–09–2020 ಸಂಜೆ 5.00 ರವರೆಗೆ | 21–09–2020 ಬೆಳಿಗ್ಗೆ 10.00 ರಿಂದ 22–09–2020 ಸಂಜೆ 5.00 ರವರೆಗೆ |

- ಮೇಲ್ಕಂಡಂತೆ ವೇಳಾಪಟ್ಟಿಯಲ್ಲಿ ಮಾಡಲಾದ ತಿದ್ದುಪಡಿ ಹೊರತುಪಡಿಸಿ, ಇನ್ನುಳಿದ ಪರಿಷ್ಕೃತ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
- ಮೇಲೆ ನಿಗದಿಪಡಿಸಿರುವ ತಿದ್ದುಪಡಿ ವೇಳಾಪಟ್ಟಿಯಂತೆ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಈ ಕೆಳಕಂಡ ವೆಬ್‌ಸೈಟ್‌ಗಳ ಮೂಲಕ ಅಥವಾ ಸಮೀಪ ಇರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಮೂಲಕ ಕಾಲಕಾಲಕ್ಕೆ ಸ್ಪಷ್ಟ ಮಾಹಿತಿ ಪಡೆದು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ಅಭ್ಯರ್ಥಿಗಳಿಗೆ ಸಂಬಂಧಿಸಿರುತ್ತದೆ.
- ಎರಡನೇ ಸುತ್ತಿನ ನಂತರ ಭರ್ತಿಯಾಗದೆ ಬಾಕಿ ಉಳಿಯುವ ಸೀಟುಗಳ ಹಂಚಿಕೆ ಕುರಿತಾದ ಪ್ರಕಟಣೆಗಾಗಿ ಅಭ್ಯರ್ಥಿಗಳು https://dtek.karnataka.gov.in or dtetech.karnataka.gov.in/kartechnical or www.cetonline.karnataka.gov.in/kea/ ವೆಬ್‌ಸೈಟ್‌ಗಳ ಮೂಲಕ ಮಾಹಿತಿ ಪಡೆಯುವುದು.

ಆಯುಕ್ತರು
ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ